ಈ ಯಲ್ಲಮ್ಮನ ಕತಿ ಒಳಗ ನಮ್ ಕತಿನೂ, ನಮ್ ಅನುಭವಗಳ್ನೂ ತಂತಾನೆ ಸೇರ್ತಾ ಹೋದ್ವು. ಈ ಯಲ್ಲಮ್ಮನಾಟದ ಫಾರ್ಮ್ ಏನದಿ ಅದೇ ನಾನು ಈ ಕತೀನ ಯಾಕ ಹೇಳ್ಬೇಕು ಅಂತ ನನ್ನ ಕಣ್ ತೆರಸಿದ್ವು. ಇದು ತಾಯಿ ರೇಣುಕಾನ ಕತಿ ಮಾತ್ರ ಅಲ್ಲ, ಬಹುಜನ ದಲಿತ ಸನ್ನಿವೇಶದಲ್ಲಿ ಜನಪದ ಕಲಾಪ್ರಕಾರ ಅಂದ್ರೇನು, ಅದ್ರ ಸುತ್ತ ಇರಾ ಜೀವ್ನ ಹೆಂಗದ... ಇದ್ರಾಗ ಬರೋ ದೇವ್ರುನೂ ನಮ್ಮಂಗೆ ಮಾತಾಡ್ತರ, ಬೀಡಿ ಸೇದ್ತರ, ನಮ್ಮಂಗ ಅವ್ರಿಗೂ ಸುಸ್ತಾಗ್ತದ ಅನ್ನಾ ಬ್ಯೂಟಿ ಗೊತ್ತಾತು. ಆಟ ನೋಡ್ತಾ ನೋಡ್ತಾ ಯಾರು ರೇಣುಕಾ, ಯಾರು ಕಲಾವಿದರು ಅನ್ನಾದೆ ತಿಳಿಯಂಗಿಲ್ಲ ಹಂಗಿರ್ತದ...

ಇದು ನಂಗೆ ಕುತೂಹಲ ಅನ್ನಸ್ತು. ನಾನು ನೋಡಿದ ಯಲ್ಲಮ್ಮನಾಟದೊಳಗ ಆ ಕ್ಷಣ, ಅಲ್ಲಲ್ಲೇ ಸೇರ್ಕೊತಾ ಇದ್ದ ಬದುಕಿನ ಪ್ರಸಂಗಗಳ್ನ 'ಯಲ್ಲಮ್ಮ ಅಂಡ್ ಅದರ್ ಸ್ಟೋರೀಸ್'ನಾಗ ಪೋಣಿಸ್ತಾ ಹೋದೆ. ಯಲ್ಲಮ್ಮನ ಕತಿ ಹೇಳಾದು, ಅದ್ರೊಳಗ ನಾವು ನೋಡಿದ ಕತಿನೂ ಸೇರಸಾದು, ಅರ್ಧ–ಇತಿಹಾಸ, ಅರ್ಧ–ಪುರಾಣದ ಈ ಕತಿ, ಕಲಾಪ್ರಕಾರ ಎಲ್ಲಾದ್ರೂ ಬಗ್ಗೆನೂ ಹೇಳ್ತಾ ಜನರ್ನ ಇದ್ರ ಕಡೆ ಸೆಳೆಯೋ ಒಬ್ಬ ಪಾತ್ರಧಾರಿ ಇಲ್ಲಿ ನಾನಾದೆ ಅನ್ನುಸ್ತು... ಆದ್ರೆ, ಎಷ್ಟೋ ಕಡೆ, ಮುಡಬಿ ಯಲ್ಲಮ್ಮನಾಟ, ಮಂಜಮ್ಮ ಜೋಗತಿಯವರ ಯಲ್ಲಮ್ಮನಾಟ, ರಾಧಾಬಾಯಿ ಹೇಳಾ ಯಲ್ಲಮ್ಮನ ಕತಿ ಒಳ್ಗೆ ಅವ್ರವ್ರ ಕಮ್ಯುನಿಟಿ ಕತಿ ಇರ್ತಾ ಇತ್ತು. ಆದ್ರ ಅದನ್ನೇ ನಾವು ಹೇಳ್ಲಾಕ ಹೋದಾಗ ಆ ಕತಿಗಳು ಬಿಟ್ಟು ಹೋಗ್ಲಾಕ ಶುರುವಾದ್ವು... ಇದು ಅಪಾಯ ಅಂತ ನಂಗೆ ಅನ್ನಸ್ಲಾಕ್ಹತ್ತಿತು. ಮಂದಿ ಕಾರ್ಯಕ್ರಮ ಕೊಡ್ರಿ ಅಂತ ಕೇಳ್ತಾರೆ. ಹತ್ತು ನಿಮಿಷ, ನಲ್ವತ್ತು ನಿಮಿಷದ್ದು ಕತಿ ಹೇಳ್ರಿ ಅಂತಾರ. ಇದು ಬರೀ ಕತಿ ಹೇಳಾ ಮಾತ್ರಲ್ಲಲ... ಇಡೀ ರಾತ್ರಿ ನಡೆಯಾ ಐದು–ಆರು ತಾಸಿನ ಯಲ್ಲಮ್ಮನಾಟದಾಗ 'ಕಲೆ' ಅನ್ನಾದು ಎಷ್ಟು ಸ್ಪಷ್ಟ ಕಾಣ್ತದ. ಇಡೀ ಜನ್ರು ಅಳ್ತಾರ, ಅದೊಂಥರ... ಹಗುರ ಆಗೋ ಬಗೆ ಅಲಾ, ಅದಾಗದೆ ಸುಮ್ನೆ ಕತಿ ಹೇಳೋದು ಏನ್ ಪ್ರಯೋಜ್ನ ಅನ್ನಸ್ತದ. ನಂಗೆ ಈ ಇಡೀ ಫೀಲ್ಡೇ ತುಂಬ ಸಂಕೀರ್ಣ ಅದಾ ಯಾಕಂದ್ರ ನಾವು ಜೀವ ಇರಾ ಮನುಷ್ರ ಜತಿ ಕೆಲ್ಸ ಮಾಡ್ಬೇಕು. ಇಂತ ಕಡಿ ಹಾಡಂದ್ರ ಅದು ಬರೀ ಹಾಡಲ್ಲ...

◆ **ಹಾಗಾದ್ರೆ... ಈ ಹಿನ್ನೆಲೆ ಒಳಗೆ ನಿಮ್ಮ ಪ್ರಕಾರ 'ವಿಶ್ವಮಾನವ' ಅಂದ್ರೆ ಯಾರು? ಏನು?**

ಇದು ಒಂದು ಫಿಲಸಾಫಿಕಲ್ ಕಾನ್ಸೆಪ್ಟ್. ಇದೊಂದು ಹಂಬಲ, ಬಯಕೆ. ಇದು ಹೆಂಗಂದ್ರೆ, ನಮ್ಮ ಸಂವಿಧಾನ ನಾವೆಲ್ಲ ಸಮಾನರು ಅಂತ ಹೇಳ್ತಾದಲ ಹಾಗೆ. ಆದ್ರೆ ಇಲ್ಲಿ ಯಾರೂ ಸಮಾನರಲ್ಲ, ಇದೇ ಸತ್ಯ. ಸಮಾನತೆ ತತ್ವದ ಮೇಲೆ ಸಂವಿಧಾನ ಕಟ್ಯಾರ. 'ವೈಷ್ಣವ ಜನತೋ...' ಅನ್ನಾದು ದೊಡ್ಡ ತತ್ವ, ಆದ್ರ ಈ ಕಾಲಕ್ಕ ಅದು ವಿಡಂಬನೆ ಅನ್ನಸ್ತದ...

◆ **ಅಂದ್ರೆ, ಹಾಗೆ ಬದುಕೋದು ಸಾಧ್ಯ ಇಲ್ಲ ಅಂತ ಹೇಳ್ತಾ ಇದ್ದೀರಾ...**

ಇಲ್ಲ... ಸಾಧ್ಯ ಇಲ್ಲ ಅಂತ ಹೇಳ್ತಾ ಇಲ್ಲ. ಹಾಗಿರೋದು ಎಲ್ಲರ್ರೂ ಆಗ್ಲಿಕ್ಕಿಲ್ಲ, ಆದ್ರೆ ಹಾಗಾಗಬೇಕು ಅಂತ ಆಸೆ ಪಡಬಹುದು ಅಂತ. ವಾಸ್ತವದಲ್ಲಿ ಅದನ್ನ ಸಾಧಿಸ್ಬೇಕು ಅಂದ್ರ, ನಾವು ಈ ಪ್ರಪಂಚದ ವಿದ್ಯಮಾನಗಳೇನಿದಾವಲ್ಲ ಅದ್ರಿಂದ ತುಂಬ ದೂರ ಹೋಗ್ಬೇಕಾಗ್ತದ. 'ನನ್ನ ಪ್ರಪಂಚ', 'ನನ್ನ ವಿಶ್ವ' ಅನ್ನಾದು ನನ್ನ ಸಮುದಾಯ, ನನ್ನ ಸ್ನೇಹಿತರು, ಕುಟುಂಬ, ನನ್ನೂರು ಇಷ್ಟರೊಳಗಿರ್ತದ. ಇವರೆಲ್ಲರ ಜೊತಿ ನಾ ಸಮಾನವಾಗಿ ನಡಕೊಂಡ್ರ ನಾನೇ 'ವಿಶ್ವಮಾನವ' ಅದೀನಿ... ಅಲಾ? ಇದ್ರೊಳಗ ಗಂಡಿನ ದೃಷ್ಟಿಕೋನ ಬ್ಯಾರೆ ಅದ, ಹೆಣ್ಣಿಂದು ಬ್ಯಾರೆ ಅದ. ಗಂಡಸರು ಫಿಲಾಸಫೈಸ್ ಮಾಡಿ ಹೇಳ್ತಾರ. ಅದನ್ನ ಕೇಳಾಕ ಚಂದನ್ನಸ್ತದ. ಆದ್ರ ಹೆಣ್ಣಾಗಿ ನಮ್ಗ ನಮ್ಮ ವಾಸ್ತವ ಅಂದ್ರ ನಾವೇನು ಉಸರಾಡ್ತಿವೋ, ತಿಂತಿವೋ, ಕಸ ಬಳಿಯಾದು, ವಾಂತಿ ಬಾಚಾದು, ಇದು ನಮ್ಮ ಪ್ರಪಂಚಾ ಅದ. ಇದ್ನ ನಾನು 'ಇದು ಗಂಡು', 'ಇದು ಹೆಣ್ಣು' ಅಂತ ಒಡದು ಹೇಳ್ತಾ ಇಲ್ಲ... ಹೆಣ್ತನದ್ದು ಮತ್ತು ಗಂಡುತನದ್ದು ಸಂವೇದನೆ ಬ್ಯಾರೆ ಅದ. ಇದನ್ನ ನಾವು ಬೇರೆ ಮಾಡಿ ನೋಡ್ಲಾಕ್ಕಾಗಂಗಿಲ್ಲ, ಯಾಕಂದ್ರ ಇದೇ ಸೃಷ್ಟಿ ಅದ. ಹೆಣ್ಣಂದ್ರ ಎಲ್ಲಾನು ಒಟ್ಟಿಗೆ ಹಿಡಿದಿಡಾ ಗುಣ, ಅದಕ್ಕಂತ ಹೆಣ್ಮಕ್ಕು ಕಾಲಾನುಕಾಲದಿಂದ ಒಟ್ಟಾಗಿನೇ ಇರ್ತಾ ಇದ್ರು, ಒಟ್ಟಾಗಿ ಕೆಲ್ಸ ಮಾಡಾದಿತ್ತು. ನಾವು ಯಾವುದ್ರ ಜೊತಿ ಒಂದಾಗಿ ಹೋಗಿರ್ತಿವೋ ಅದೇ ನಮ್ ಪ್ರಪಂಚ ಅಲಾ... ಹಿಂಗಿರವ್ರೆ 'ವಿಶ್ವಮಾನವ' ಇರ್ತೋದು... ●